# ಕರ್ನಾಟಕ ಸರ್ಕಾರ

ಸಂಖ್ಯೆ: ಸಂವ್ಯಶಾಇ 88 ಆಡಳಿತ 2001

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ: 22.08. 2002.

## ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, 2000ದ 3ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ವಿವರಣೆಗಳ ಪ್ರಕಟಣೆ.

Click here for English Version

ವಿಷಯ: ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ನಿಯಮಗಳು 2002ರ 3ನೇ ನಿಯಮದೊಂದಿಗೆ ಓದಿಕೊಂಡ, ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, 2000ದ 3ನೇ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸಂಬಂಧಿಸಿದ ವಿವರಗಳ ಪ್ರಕಟಣೆ.

............

1. ರಚನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಕರ್ನಾಟಕ ಸರ್ಕಾರದ ಸಚಿವಾಲಯದ ಇಲಾಖೆಯಾಗಿದ್ದು, ಇದು ಬೆಂಗಳೂರಿನ ವಿಧಾನ ಸೌಧದಲ್ಲಿ ಇದೆ. ಶ್ರೀ ಡಿ.ಬಿ. ಚಂದ್ರೆಗೌಡ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲಾಖೆಯ ಪ್ರಭಾರವನ್ನು ಹೊಂದಿರುವರು. ಶ್ರೀ. ಮ.ರಾ.ಹೆಗಡೆ, ಇವರು ಇಲಾಖೆಯ ಕಾರ್ಯದರ್ಶಿಯಾಗಿದ್ದು, ಮೂವರು ಅಪರ ಪ್ರಾರೂಪಕರು ಮತ್ತು ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿಗಳು, ಆರು ಸಹಾಯಕ ಪ್ರಾರೂಪಕರು ಮತ್ತು ಸರ್ಕಾರದ ಪದನಿಮಿತ್ತ ಉಪ / ಅಧೀನ ಕಾರ್ಯದರ್ಶಿಗಳು, ಒಬ್ಬರು ಭಾಷಾಂತರ ಉಪ ನಿರ್ದೇಶಕರು, ಒಬ್ಬರು ಭಾಷಾಂತರ ಸಹಾಯಕ ನಿರ್ದೇಶಕರು, ನಾಲ್ಕು ಶಾಖಾಧಿಕಾರಿಗಳು, ಒಬ್ಬ ಸಂಶೋಧನಾಧಿಕಾರಿ ಮತ್ತು ಅನೇಕ ಗ್ರೂಪ್ ಸಿ ಮತ್ತು ಡಿ ವರ್ಗದ ನೌಕರರು ಇರುತ್ತಾರೆ.

ಇಲಾಖೆಯ ಪ್ರಕಾರ್ಯಗಳು ಈ ಮುಂದಿನಂತೆ ಇವೆ.:

ಇಲಾಖೆಗೆ ಹಂಚಿಕೆಯಾಗಿರುವ ಕಾರ್ಯಕಲಾಪಗಳು- ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಈ ಕೆಳಗಿನ ವಿಭಾಗಗಳನ್ನು ಹೊಂದಿದೆ:

1. ಶಾಸನ ರಚನೆ.
2. ಸಂಸದೀಯ ವ್ಯವಹಾರಗಳು
3. ಕ್ರೋಢೀಕರಣ ಮತ್ತು ಪ್ರಕಟಣೆ

4. ಆಡಳಿತ

5. ಭಾಷಾಂತರ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಸೇವಾ ವಿಷಯಗಳು.

1. ಶಾಸನ ರಚನೆ:

(ಎ) ಶಾಸನ ರಚನೆ, ವಿಧೇಯಕಗಳ ಪ್ರಾರೂಪಣ ಮತ್ತು ಪರಿಶೀಲನೆ, ವಿಧೇಯಕಗಳನ್ನು ಶಾಸನಗಳನ್ನಾಗಿ ಅಧಿನಿಯಮಿಸುವುದಕ್ಕೆ ಸಂಬಂಧಪಟ್ಟಂತೆ ಶಾಸನಾತ್ಮಕ ಯೋಜನೆಗಳು ಮತ್ತು ಶಾಸನಾತ್ಮಕ ಕಾರ್ಯವಿಧಾನಗಳು ಹಾಗೂ ಸಚಿವಾಲಯದ ಇತರ ಕಾರ್ಯಗಳ ಬಗ್ಗೆ ಸಲಹೆ ನೀಡುವುದು.

(ಬಿ) ಸ್ಥಾಯಿ ನಿಯಮಗಳು, ಅಧಿಸೂಚನೆಗಳು, ಆದೇಶಗಳು ಮತ್ತು ಉಪ ವಿಧಿಗಳಂಥ ಅಧೀನ ಶಾಸನ ರಚನೆಗಳ ಪರಿಶೀಲನೆ ಮತ್ತು ಪರಿಷ್ಕರಣೆ.

(ಸಿ) ಕೇಂದ್ರ ಸರ್ಕಾರದ ವಿಧೇಯಕಗಳ, ಅಧಿನಿಯಮಗಳ ಮತ್ತು ಅಧ್ಯಾದೇಶಗಳ ಪ್ರಕಟಣೆ.

(ಡಿ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸಂಕಲನಗಳ ಪರಿಷ್ಕರಣೆ ಮತ್ತು ಅಧಿನಿಯಮಗಳು, ವಿಧೇಯಕಗಳು, ಅಧ್ಯಾದೇಶಗಳು, ನಿಯಮಗಳು ಹಾಗೂ ಆದೇಶಗಳ ಮುದ್ರಣ ಹಾಗೂ ಪ್ರಕಟಣೆ.

(ಇ) ರಾಜ್ಯ ವಿಧಾನಮಂಡಲದ ಕಾರ್ಯವಿಧಾನ ನಿಯಮಗಳು.

(ಎಫ್) ಭಾರತ ಸಂವಿಧಾನದ 299ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚನೆಗಳು

**2.** ಸಂಸದೀಯ ವ್ಯವಹಾರಗಳು: -

(ಎ) ವಿಧಾನಮಂಡಲದ ಸದನಗಳ ಸಭೆ ಕರೆಯುವುದು ಮತ್ತು ಸಮಾಪನಗೊಳಿಸುವುದು, ವಿಧಾನ ಸಭೆಯನ್ನು ವಿಸರ್ಜಿಸುವುದು.

(ಬಿ) ವಿಧಾನಮಂಡಲದ ಉಭಯ ಸದನಗಳಲ್ಲಿ ವಿಧಾಯೀ ಮತ್ತು ಇತರ ಸರ್ಕಾರಿ ಕಾರ್ಯಕಲಾಪಗಳ ಯೋಜನೆ ಮತ್ತು ಸಮನ್ವಯ.

(ಸಿ) ಸದಸ್ಯರಿಂದ ಸೂಚಿತವಾದ ಪ್ರಸ್ತಾವಗಳ ಚರ್ಚೆಗೆ ವಿಧಾನ ಮಂಡಲದ ಸದನಗಳಲ್ಲಿ ಸರ್ಕಾರಿ ವೇಳೆಯ ಹಂಚಿಕೆ.

(ಡಿ) ವಿವಿಧ ಇಲಾಖೆಗಳಿಗಾಗಿ ಶಾಸಕರ ಅನೌಪಚಾರಿಕ ಸಮಾಲೋಚನಾ ಸಮಿತಿಗಳ ಕಾರ್ಯನಿರ್ವಹಣೆ.

(ಇ) ವಿಧಾನಮಂಡಲದ ಉಭಯ ಸದನಗಳ ಸಚಿವಾಲಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಲಾ 67 ಎಲ್ ಸಿ ಆರ್ 79 ದಿನಾಂಕ 29ನೇ ಸೆಪ್ಟೆಂಬರ್ 1984ರಲ್ಲಿ ವಹಿಸಿಕೊಟ್ಟಿಲ್ಲದ ವಿಷಯಗಳು.

(ಎಫ್) ವಿಧಾನ ಮಂಡಲಕ್ಕೆ ಸಂಬಂಧಿಸಿದ ಕಾರ್ಯವಿಧಾನದ ಮತ್ತು ಇತರ ವಿಷಯಗಳ ಬಗ್ಗೆ ಸಚಿವಾಲಯದ ಇಲಾಖೆಗಳಿಗೆ ಸಲಹೆ ನೀಡುವುದು.

(ಜಿ) ವಿಧಾನಮಂಡಲ ಸಮಿತಿಗಳು ಮಾಡಿದ ಸಾಮಾನ್ಯ ಅನ್ವಯ ಶಿಫಾರಸ್ಸುಗಳ ಮೇಲೆ ಸಚಿವಾಲಯದ ಇಲಾಖೆಗಳು ಕೈಗೊಂಡ ಕ್ರಮದ ಬಗ್ಗೆ ಸಮನ್ವಯಗೊಳಿಸುವುದು.

(ಹೆಚ್) ವಿಧಾನ ಮಂಡಲದ ಸದಸ್ಯರ ಅನರ್ಹತೆಯನ್ನು ನಿವಾರಿಸುವುದು.

(ಐ) ಶಾಸಕರ ಅಧಿಕಾರಗಳು, ವಿಶೇಷಾಧಿಕಾರಗಳು ಹಾಗೂ ಪ್ರತಿರಕ್ಷಣೆಗಳಿಗೆ ಸಂಬಂಧಿಸಿದ ವಿಷಯಗಳು.

3. ಕ್ರೋಢೀಕರಣ ಮತ್ತು ಪ್ರಕಟಣೆ:

(ಎ) ಇದರ ಆಡಳಿತ ನಿಯಂತ್ರಣದಲ್ಲಿರುವ ಇಲಾಖೆಗಳ ಸಂಬಂಧದಲ್ಲಿ ಸಂಹಿತೆಗಳು ಮತ್ತು ಕೈಪಿಡಿಗಳು.

(ಬಿ) ಕೋಡಲ್ ವ್ಯಾಲ್ಯೂಮ್‌ಗಳು.

- ಇವುಗಳನ್ನು ತಯಾರಿಸುವುದು.

(ಸಿ) ರಾಜ್ಯ ಅಧಿನಿಯಮಗಳನ್ನು ಇಂದಿನವರೆಗೆ ಪರಿಷ್ಕರಿಸುವುದು

4. ಆಡಳಿತ:

ಇಲಾಖೆಯ ಆಡಳಿತ ವಿಭಾಗವು ಭಾಷಾಂತರ ನಿರ್ದೇಶನಾಲಯದ ಸೇವಾ ವಿಷಯಗಳನ್ನು ನಿರ್ವಹಿಸುತ್ತದೆ. ಇದು ಇಲಾಖೆಯ ಸಂಘಟನೆ ಮತ್ತು ನಿರ್ವಹಣೆ ಕಚೇರಿಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿ ಶೈಕ್ಷಣಿಕ ವರ್ಷ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ದೆಗಳನ್ನು ನಡೆಸುವ ಕಾರ್ಯವನ್ನು ಈ ವಿಭಾಗವು ಸಮನ್ವಯಗೊಳಿಸುತ್ತದೆ. ರಾಜ್ಯದ ಸಂಸತ್ ಸದಸ್ಯರು ಮತ್ತು ರಾಜ್ಯದ ಶಾಸಕರು ಅಸ್ವಾಭಾವಿಕವಾಗಿ ನಿಧನರಾದ ಸಂದರ್ಭದಲ್ಲಿ ಪರಿಹಾರವನ್ನು ಮಂಜೂರು ಮಾಡುವುದು, ಇಲಾಖೆಯ ವೆಬ್‌ಸೈಟ್ ನಿರ್ವಹಣೆ ಮುಂತಾದವುಗಳನ್ನು ಆಡಳಿತ ಶಾಖೆಯು ನಿರ್ವಹಿಸುತ್ತದೆ.

5. ಭಾಷಾಂತರ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಸೇವಾ ವಿಷಯಗಳು

(ಎ) ನೇಮಕಾತಿ ನಿಯಮಗಳು ಮತ್ತು ನೇಮಕಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ಇರುವ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ಸಂಬಂಧದಪಟ್ಟ ನೇಮಕಾತಿ ನಿಯಮಗಳು.

(ಬಿ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಡಿಯಲ್ಲಿ ಬರುವವರನ್ನು ಹೊರತುಪಡಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ಇರುವ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ನೇಮಕಾತಿಗಳು, ನಿಯೋಜನೆ, ವರ್ಗಾವಣೆಗಳು, ರಜೆ ಮುಂತಾದವುಗಳು.

**II.** ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು ಮತ್ತು ಅವರು ತೀರ್ಮಾನ ಕೈಗೊಳ್ಳುವಾಗ ಅನುಸರಿಸುವ ಕಾರ್ಯವಿಧಾನ

ಗ್ರೂಪ್ 'ಎ ' ಅಧಿಕಾರಿಗಳ ಹೆಸರು ಮತ್ತು ಕೆಲಸದ ಹಂಚಿಕೆ

| ಅಧಿಕಾರಿಯ ಹೆಸರು | ಅಧಿಕಾರಿಗಳಿಗೆ ಹಂಚಿಕೆಯಾದ ಕೆಲಸ (ಇಲಾಖಾವಾರು) | ದೂರವಾಣಿ ಸಂಖ್ಯೆ |
|---|---|---|
| ಶ್ರೀ ಮ.ರಾ ಹೆಗಡೆ<br>ಕಾರ್ಯದರ್ಶಿ | ಇಲಾಖೆಯ ಎಲ್ಲಾ ವಿಷಯಗಳ ಪ್ರಭಾರ | 2254445 (O)<br>2092387 (O)<br>3415977 (R) |
| ಶ್ರೀ ಜಿ. ದಕ್ಷಿಣಾ ಮೂರ್ತಿ<br>ಅಪರ ಕಾರ್ಯದರ್ಶಿ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಆಹಾರ ಮತ್ತು ನಾಗರೀಕ ಸರಬರಾಜುಗಳು, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು, ಕನ್ನಡ ಮತ್ತು ಸಂಸ್ಕೃತಿ, ಮಾಹಿತಿ ಮತ್ತು ತಂತ್ರಜ್ಞಾನ, ಕನ್ನಡ ಪ್ರಾರೂಪಣೆ ಮತ್ತು ವಿಧಾನ ಮಂಡಲದ ಸದನಗಳನ್ನು ಸಭೆ ಕರೆಯುವ ಮತ್ತು ಸಮಾಪನಗೊಳಿಸುವುದನ್ನು ಹೊರತುಪಡಿಸಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸಂಬಂಧಿಸಿದ ಕಾರ್ಯಗಳು. | 2092384 (O)<br>2265518 (O)<br>5277936 (R) |
| ಶ್ರೀ ಜಿ.ಕೆ. ಬೋರೇಗೌಡ<br>ಅಪರ ಕಾರ್ಯದರ್ಶಿ | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಸಮಾಜ ಕಲ್ಯಾಣ, ಕಾನೂನು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್, ನಗರಾಭಿವೃದ್ಧಿ ವಸತಿ, ಆರ್ಥಿಕ ಇಲಾಖೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಗ್ರಂಥಾಲಯ. | 2254079 (O)<br>2092242 (O)<br>3373079 (R) |
| ಶ್ರೀ ಡಿ.ವಿ. ಹತ್ತಿ<br>ಅಪರ ಕಾರ್ಯದರ್ಶಿ | ಕಾರ್ಮಿಕ, ಗೃಹ ಮತ್ತು ಸಾರಿಗೆ, ವಾಣಿಜ್ಯ ಮತ್ತು ಕೈಗಾರಿಕೆಗಳು, ಇಂಧನ, ಮಹಿಳಾ ಮತ್ತು ಮಕ್ಕಳ | 2203468 (O)<br>2092365 (O) |

| | | |
|---|---|---|
| | ಕಲ್ಯಾಣ, ಸಂಸದೀಯ ವ್ಯವಹಾರಗಳು (ವಿಧಾನಮಂಡಲದ ಸದನಗಳ ಸಭೆ ಕರೆಯುವುದು ಮತ್ತು ಸಮಾಪನಗೊಳಿಸುವುದು), ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ ಮತ್ತು ತೋಟಗಾರಿಕೆ, ಮೂಲಭೂತ ಸೌಲಭ್ಯ ಅಭಿವೃದ್ಧಿ, ಲೋಕೋಪಯೋಗಿ ಇಲಾಖೆ, ನೀರಾವರಿ, ಸಹಕಾರಿ, ಕ್ರೋಢೀಕರಣ ಮತ್ತು ಪ್ರಕಟಣೆ. | 5533674 (R) |
| ಶ್ರೀ ಪಿ. ಎನ್. ದೇಸಾಯಿ ಉಪ ಕಾರ್ಯದರ್ಶಿ | ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಮಾಹಿತಿ ಮತ್ತು ತಂತ್ರಜ್ಞಾನ, ಇಂಧನ, ಮೂಲಭೂತ ಸೌಲಭ್ಯ, ಸಮಾಜ ಕಲ್ಯಾಣ | 2258965 (O)<br>2092434 (O)<br>5715070 (R) |
| ಶ್ರೀ ಭಾ.ಭೀ. ಪತ್ತಾರ್ ಉಪ ಕಾರ್ಯದರ್ಶಿ | ಸಹಕಾರ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ವಸತಿ, ಕೃಷಿ ಮತ್ತು ತೋಟಗಾರಿಕೆ, ಆಹಾರ ಮತ್ತು ನಾಗರಿಕ ಸರಬರಾಜುಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ. | 2200625 (O)<br>2092293 (O)<br>3646523 (R) |
| ಖಾಲಿ<br>(ಶ್ರೀ ಭಾ.ಭೀ. ಪತ್ತಾರ್, ಉಪ ಕಾರ್ಯದರ್ಶಿ ಪ್ರಭಾರ) | ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಲೋಕೋಪಯೋಗಿ ಇಲಾಖೆ, ನೀರಾವರಿ, ಯೋಜನೆ | 2200625 (O)<br>2092293 (O)<br>3646523 (R) |
| ಶ್ರೀ ಎಲ್. ಸಿದ್ದಯ್ಯ ಉಪ ಕಾರ್ಯದರ್ಶಿ | ಕ್ರೋಢೀಕರಣ ಮತ್ತು ಏಕಸದಸ್ಯ ಕೋಡಲ್ ಸಮಿತಿಗೆ ಸಂಬಂಧಿಸಿದ ವಿಷಯಗಳು ಮತ್ತು ವಿಧೇಯಕಗಳ ಮುದ್ರಣದ ಸಮನ್ವಯ | 2208045 (O)<br>2092866 (O)<br>5276231 (R) |
| ಶ್ರೀ ಆರ್. ನಾವೂರ್‌ಕರ್ ಉಪ ನಿರ್ದೇಶಕರು (ಕನ್ನಡ ಪ್ರಾರೂಪಣ) | ವಿಧೇಯಕಗಳು, ಅಧಿನಿಯಮಗಳು, ಅಧಿಸೂಚನೆಗಳು, ನಿಯಮಗಳು, ಮುಂತಾದವುಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲೀಷಿಗೆ ಭಾಷಾಂತರಿಸುವುದು. | 2263261 (O)<br>2092039 (O)<br>5715590 (R) |
| ಶ್ರೀ ಕೆ. ದ್ವಾರಕನಾಥ ಬಾಬು ಅಧೀನ ಕಾರ್ಯದರ್ಶಿ | ಗೃಹ ಮತ್ತು ಸಾರಿಗೆ, ಕಾರ್ಮಿಕ, ವಾಣಿಜ್ಯ ಮತ್ತು ಕೈಗಾರಿಕೆಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 2092665 (O) |

| | | |
|---|---|---|
| | ಇಲಾಖೆ, ಮತ್ತು ಗಣಕ ಯಂತ್ರಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳು. | |
| ಶ್ರೀ ರಿಚಾರ್ಡ್ ಲೋಬೋ ಅಧೀನ ಕಾರ್ಯದರ್ಶಿ | ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಆಡಳಿತ, ಗ್ರಂಥಾಲಯ. | 2092862 (O) |

ಈ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಸಚಿವಾಲಯದ ಕೈಪಿಡಿ ಮತ್ತು ಕಚೇರಿ ಕಾರ್ಯವಿಧಾನದಲ್ಲಿ ಹಾಗೂ ಸಂಬಂಧಿಸಿದ ನಿಯಮಗಳಲ್ಲಿ ವಿಧಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಕೆಲಸ ನಿರ್ವಹಿಸುತ್ತಾರೆ.

**III.** ತನ್ನ ಪ್ರಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಾಧಿಕಾರವು ಹಾಕಿಕೊಂಡಿರುವ ಮಾದರಿ.

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಸಚಿವಾಲಯದ ವಿವಿಧ ಇಲಾಖೆಗಳಿಗೆ ಸಮಾಲೋಚನಾ ಇಲಾಖೆಯಾಗಿದೆ. ಈ ಇಲಾಖೆಗೆ ಸಂಬಂಧಿಸಿದಂತೆ ಯಾವುವೇ ಯೋಜನೆಗಳು ಇರುವುದಿಲ್ಲ. ಈ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಕಾರ್ಯನಿರ್ವಹಣೆಯನ್ನು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ.

**IV.** ಮಾಹಿತಿಯನ್ನು ಪಡೆಯಲು ನಾಗರಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಣೆ.- ಜನಸಾಮಾನ್ಯರಿಗೆ ಈ ಮುಂದಿನ ಮಾಹಿತಿಯನ್ನು ಒದಗಿಸುವುದು,-

(1) ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಹಾಗೂ ಜಾರಿಯಲ್ಲಿರುವ ರಾಜ್ಯದ ಎಲ್ಲಾ ಅಧಿನಿಯಮಗಳು,

(2) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಪ್ರಕಟಿಸಿದ ಪ್ರಕಟಣೆಗಳು;

(3) ಈ ಮುಂದಿನ ಅಧಿನಿಯಮಗಳು ಜನಸಾಮಾನ್ಯನಿಗೆ ಲಭ್ಯ ಇವೆ:

ಕರ್ನಾಟಕ ರಾಜ್ಯದಲ್ಲಿ ನಿರಸನಗೊಳ್ಳದ ಅಧಿನಿಯಮಗಳು

(ಇಲಾಖೆಯ ವೆಬ್‌ಸೈಟ್ *dpal.kar.nic.in* ರಲ್ಲಿ *Alphabetic Index to Acts* ನೋಡುವುದು)

***Home***